# 4 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು

ಸಿಸಿ ನಂ. 20912/2013 ಚಾಸಾಃ 6 ಪ್ರಾಸಾ ಃ 4

ಸಾಕ್ಷಿದಾರರ ಹೆಸರು ಃ ರವಿ ಕುಲಕರ್ಣಿ

ತಂದೆಯ ಹೆಸರು ಃ ಭೀಮರಾವ್ ಕುಲಕರ್ಣಿ

ವಯಸ್ಸು ಃ 59 ವರ್ಷ

ಕೆಲಸ ಃ ವ್ಯವಸ್ಥಾಪಕರು, ಎಸ್.ಬಿ.ಐ ಬ್ಯಾಂಕ್, ಎಸ್.ಎ.ಆರ್.ಬಿ ಬ್ಯಾಂಕ್, ಹುಬ್ಬಳ್ಳಿ

ವಾಸ ಃ ಹುಬ್ಬಳ್ಳಿ

ಸಾಕ್ಷಿಯನ್ನು ದಿಃ 12.06.2023 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಖ್ಯವಿಚಾರಣೆ ಃ ಪಿ.ಸಾ.ಸ.ಅ ರವರಿಂದಃ

1. ನಾನು ಬೆಂಗಳೂರಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಹೊರಮಾವು ಶಾಖೆಯಲ್ಲಿ ಫೆಬ್ರವರಿ 2011 ರಿಂದ ಜುಲೈ 2011 ರವರೆಗೆ ಶಾಖಾ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸಿರುತ್ತೇನೆ.

2. ಆರೋಪಿತರು ಹೊರಮಾವು ಶಾಖೆಯ ಹಿಂದಿನ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸಿದ್ದರು. ಈ ಪ್ರಕರಣದಲ್ಲಿ ದೂರನ್ನು ನೀಡಿದಂತಹ ಚಾಸಾ 1 ರವರು ವಲಯ ವ್ಯವಸ್ಥಾಪಕರಾಗಿ ಸದರಿ ಬ್ಯಾಂಕಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ನನಗೆ ಚಾಸಾ 2 ರಿಂದ 5 ರವರ ಪರಿಚಯ ಇರುತ್ತದೆ. ನಾನು ಪ್ರಭಾರವನ್ನು ವಹಿಸಿಕೊಂಡಾಗ ಅವರು ಸದರಿ ಶಾಖಾ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಅವರು ನನ್ನ ಸಮಕಾಲಿನ ಅಧಿಕಾರಿಗಳು ಆಗಿದ್ದರು.

3. ನನಗೆ ದಿಃ 05-02-2011 ರಂದು ಬಂದ ಖಚಿತ ಬಾತ್ಮಿಯ ಸದರಿ ಶಾಖಾ ಕಚೇರಿಯಲ್ಲಿನ ಬ್ಯಾಂಕಿನ ಖಾತೆಯ ಹಣ ದುರ್ವಿನಿಯೋಗವಾಗಿ ವಂಚನೆ ಆಗಿರುವುದು ತಿಳಿದು ಬಂದಿರುತ್ತದೆ. ಈ ಪ್ರಕರಣದ ಬಗ್ಗೆ ಪ್ರಥಮ ವರ್ತಮಾನ ವರದಿ ದಾಖಲಾಗುವ ಸಮಯದಲ್ಲಿ ಹಿಂದಿನ ಶಾಖಾ ವ್ಯವಸ್ಥಾಪಕರಾದ ದತ್ತಾತ್ರೇಯ ರವರು ರೂ. 90,89,000/- ಚಿಲ್ಲರೆ ಹಣವನ್ನು ದುರ್ವಿನಿಯೋಗ ಮಾಡಿಕೊಂಡಿರುವುದು ನನಗೆ ತಿಳಿದು ಬಂದಿರುತ್ತದೆ. ಅವರು ಸಾಲದ ಖಾತೆಯಲ್ಲಿನ ಹಣವನ್ನು ತಮ್ಮ ಸ್ವಂತ ಖಾತೆಗೆ ವರ್ಗಾವಣೆ ಮಾಡಿಕೊಂಡಿರುವ ವಿಚಾರ ನನಗೆ ತಿಳಿದು ಬಂದಿರುತ್ತದೆ. ಉಳಿದಂತೆ ನನಗೆ ಯಾವುದೇ ಮಾಹಿತಿ ಇಲ್ಲ. ಈ ಕುರಿತು ಪೊಲೀಸರ ಮುಂದೆ ತನಿಖಾ ಕಾಲದಲ್ಲಿ ನಾನು ಹೇಳಿಕೆಯನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ಪ್ರಾಜ್ಞಾ ಹಿ ಸ ಸ ಅ ರವರು ಭಾಗಶಃ ಪ್ರತಿಕೂಲ ಸಾಕ್ಷಿಯನ್ನು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಭಿನ್ನವಿಸಿಕೊಂಡಿರುತ್ತಾರೆ. ಅದರಂತೆ ಮನವಿಯನ್ನು ಪುರಸ್ಕರಿಸಲಾಯಿತು)

<u>ಪಾಟೀ ಸವಾಲುಃ ಪ್ರಾಜ್ಞಾ ಹಿ.ಸಾ.ಸ.ಅ ರವರಿಂದಃ</u>

ಚಾಸಾ 3 ಶ್ರೀಮತಿ ಕಲಾವತಿ ರವರು ನಮ್ಮ ಬ್ಯಾಂಕಿನಲ್ಲಿ ವಿಶೇಷ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು ಎಂದರೆ ನಿಜ. ಆ ಸಮಯದಲ್ಲಿ ಅವರಿಗೆ ಗಣಕ ಯಂತ್ರ ಪರಿಕರಗಳನ್ನು ನಿರ್ವಹಿಸಲು ಪ್ರತ್ಯೇಕವಾದ ಹಾಗೂ ಗೌಪ್ಯವಾದ ಪಾಸ್ ವರ್ಡ್ ಗಳನ್ನು ಒದಗಿಸಲಾಗಿತ್ತು ಎಂದರೆ ನಿಜ. ಈ ಸಂಬಂಧವಾಗಿ ನಾನು ಆರೋಪಿಯು ಪೊಲೀಸರ ಮುಂದೆ ಸದರಿ ಚಾಸಾ 3

ರವರ ಪಾಸ್ ವರ್ಡ್ ಅನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ನಮೂದುಗಳನ್ನು ಮಾಡಿ ಬ್ಯಾಂಕಿನ ಹಣವನ್ನು ದುರ್ವಿನಿಯೋಗ ಮಾಡಿರುವುದಾಗಿ ಹಾಗೂ ಆ ಹಣದಿಂದ ಆರೋಪಿಯು ಎರಡು ನಿವೇಶಗಳನ್ನು ಖರೀದಿ ಮಾಡಿರುವುದಾಗಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕೇವಲ ನನಗೆ ಮಾಹಿತಿ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ.

ಆರೋಪಿಯು  ಚಾಸಾ 3 ರವರ ಪಾಸ್ ವರ್ಡ್ ಅನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ನಮೂದುಗಳನ್ನು ಮಾಡಿ ಬ್ಯಾಂಕಿನ ಹಣವನ್ನು ದುರ್ವಿನಿಯೋಗ ಮಾಡಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಪ್ರತಿ ರಕ್ಷಣಾ ವಕೀಲರಾದ ಶ್ರೀ ಎಮ್.ಆರ್ ರವರಿಂದಃ

ಸಾಕ್ಷಿದಾರರಾಗಿ ಹೇಳಿಕೆಯನ್ನು ನೀಡಲು ಠಾಣೆಯಿಂದ ನಿಮಗೆ ನೋಟೀಸು ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ತನಿಖಾ ಕಾಲದಲ್ಲಿ ಪೊಲೀಸ್ ದಿನಚರಿಯಲ್ಲಿ ಸಹಿ ಮಾಡಿದ ವಿಚಾರ ನನಗೆ ಜ್ಞಾಪಕಕ್ಕೆ ಬರುತ್ತಿಲ್ಲ. ಹೇಳಿಕೆ ನೀಡುವ ಸಮಯದಲ್ಲಿ ಕಚೇರಿಯ ಹಾಜರಾತಿ ಪುಸ್ತಕಕ್ಕೆ ಸಹಿ ಮಾಡಿರುತ್ತೇನೋ ಇಲ್ಲವೋ ನನಗೆ ನೆನಪು ಇರುವುದಿಲ್ಲ. ಹೇಳಿಕೆ ನೀಡುವ ಸಮಯದಲ್ಲಿ ಮೇಲಾಧಿಕಾರಿಗಳ ಅನುಮತಿಯನ್ನು ಲಿಖಿತ ರೂಪದಲ್ಲಿ ಪಡೆದಿರುತ್ತೀರಾ ಎಂದರೆ ಸಾಕ್ಷಿಯು

ಮೌಖಿಕವಾಗಿ ಪಡೆದಿರುತ್ತೇನೆ ಎಂದು ಹೇಳುತ್ತಾರೆ. ನಾನು ಪೊಲೀಸ್ ಠಾಣೆಗೆ ತೆರಳಿ ಹೇಳಿಕೆಯನ್ನು ನೀಡದಿದ್ದರೂ ಸಹ ಪೊಲೀಸರ ಚಿತಾವಣೆಯ ಮೇರೆಗೆ ಹೇಳಿಕೆಯನ್ನು ನೀಡಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನೀಡಿರುವ ಹೇಳಿಕೆಯಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆರೋಪಿಯ ಖಾತೆಗೆ ಹಣ ವರ್ಗಾವಣೆಯಾಗಿದೆ ಎನ್ನುವ ಆರೋಪಣೆಯನ್ನು ಸಾಬೀತು ಪಡಿಸುವ ಬಗ್ಗೆ ಯಾವ ದಾಖಲೆಗಳು ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಘಟನೆ ಜರುಗುವ ಸಮಯದಲ್ಲಿ ಶಾಖಾ ಕಚೇರಿಯಲ್ಲಿ ಸೇವೆ ಸಲ್ಲಿಸುತ್ತಿರಲಿಲ್ಲ ಎಂದರೆ ನಿಜ. ಆರೋಪಿಯನ್ನು ಇದೇ ಪ್ರಥಮ ಬಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿರುವುದು ಎಂದರೆ ನಿಜ. ಆರೋಪಿ ಯಾವುದೇ ಕಾಲಕ್ಕೂ ಪಾಸ್ ವರ್ಡ್ ಅನ್ನು ದುರುಪಯೋಗ ಪಡಿಸಿಕೊಂಡು ಹಣವನ್ನು ದುರ್ವಿನಿಯೋಗ ಮಾಡಿಕೊಂಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಹಣವನ್ನು ದುರ್ವಿನಿಯೋಗ ಮಾಡಿಕೊಂಡ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಯಾವುದೇ ದಾಖಲೆಗಳು ಇಲ್ಲದಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷ್ಯ ಮುಕ್ತಾಯ

ಮರು ವಿಚಾರಣೆಃ ಹಿ ಸ ಸ ಅ ರವರು ಇಲ್ಲ ಎಂದು ತಿಳಿಸಿರುತ್ತಾರೆ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4 ನೇ ಅ ಮು ಮ ದಂ ನ್ಯಾ